**ದಿನಾಂಕ: 22-07-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ.ಎಸ್.ಎಂ. ವಕೀಲರಿಂದ**

1. ನಾನು ಹತ್ತಿಕುಣಿಯಲ್ಲಿ ಇರುತ್ತೇನೆ. ನನ್ನ ತಂದೆ ತಾಯಿ ಮತ್ತು ನನ್ನ ಅಣ್ಣತಮ್ಮಂದಿರು ಹತ್ತಿಕುಣಿಯಲ್ಲಿ ಇರುತ್ತಾರೆ. ನಿಮ್ಮ ದಾವಾದ ಫ್ಯಾರಾ ನಂ.4ರಲ್ಲಿ ಸಂಗನಬಸಮ್ಮ ಗಂಡ ಚನ್ನಬಸಪ್ಪ @ ಬಸಪ್ಪರವರಿಗೆ ಇಬ್ಬರು ಮಕ್ಕಳಿದ್ದಾರೆ ಎಂದು ಬರೆಸಿದ್ದೀರಿ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಅದೇ ಫ್ಯಾರಾದಲ್ಲಿ ನಿಂಗಮ್ಮ ಮತ್ತು ಬಸಮ್ಮ ಎಂದು ಬರೆಸಿದ್ದೀರಿ ಎಂದರೆ ನೀಲಮ್ಮ ಗಂಡ ನಾಗಪ್ಪ ಎಂದು ಬರೆಸಿದ್ದೇನೆ ಎಂದು ಉತ್ತರಿಸುತ್ತಾರೆ.

2. ಸಂಗನಬಸಮ್ಮಳಿಗೆ ಎಷ್ಟು ಜನ ಗಂಡು ಮಕ್ಕಳು ಎಷ್ಟು ಜನ ಹೆಣ್ಣುಮಕ್ಕಳು ಎಂದರೆ ಇಬ್ಬರು ಹೆಣ್ಣುಮಕ್ಕಳು ಎಂದು ಉತ್ತರಿಸುತ್ತಾರೆ. ಸಂಗನಬಸಮ್ಮಳಿಗೆ ಅಯ್ಯಪ್ಪ ಎಂಬ ಮಗ ಇದ್ದನೋ ಇಲ್ಲವೋ ಎಂದರೆ ಇದ್ದನು ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ವಂಶಾವಳಿ ಏನಾದರೂ ಹಾಕಿದ್ದೀರಾ ಎಂದರೆ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿಸಿದಂತಹ ದಾಖಲೆಯಲ್ಲಿ ವಂಶಾವಳಿ ತೋರಿಸಲು ಆಗುತ್ತಾ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ವಾದಪತ್ರದಲ್ಲಿ ಸಂಗನಬಸಮ್ಮಳಿಗೆ ಅಯ್ಯಪ್ಪ ಮಗ ಇದ್ದಾನೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಬರಮರೆಡ್ಡಿಯ ಊರು ನಾಚವಾಳ. ನಾಚವಾಳದಲ್ಲಿ ಬರಮರೆಡ್ಡಿಗೆ ಸ್ಥಿರಾಸ್ತಿ ಚಾರಾಸ್ತಿ ಇದೆ ಎಂದರೆ ಸರಿ. ಹತ್ತಿಕುಣಿಯಲ್ಲಿ ಇರುವಂತಹ ಆಸ್ತಿಗೂ ನಿಮ್ಮ ತಂದೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗೆ ಸಂಗನಬಸಮ್ಮ ಏನಾಗಬೇಕು ಎಂದರೆ ಅತ್ತೆ ಆಗಬೇಕು ಎಂದು ಉತ್ತರಿಸಿ ಸಾಕ್ಷಿ ಮುಂದುವರೆದು ಅಜ್ಜಿ ಆಗಬೇಕು ಎಂದು ಉತ್ತರಿಸುತ್ತಾರೆ. ಸಂಗನಬಸಮ್ಮಳ ಮಗ ಅಯ್ಯಣ್ಣನ ಅಂತ್ಯಸಂಸ್ಕಾರ ಎಲ್ಲಿ ಆಯಿತು ಎಂದರೆ ಗೊತ್ತಿಲ್ಲ. ಸಂಗನಬಸಮ್ಮಳ ಮಗ ಅಯ್ಯಣ್ಣನಿಗೆ ಕುಷ್ಠರೋಗ ಇದ್ದಿದ್ದರಿಂದ 1ನೇ ಪ್ರತಿವಾದಿ ಸಂರಕ್ಷಣೆ ಮಾಡಿ ಆತನ ಅಂತಿಮ ಸಂಸ್ಕಾರ ಮಾಡಿದ್ದಾನೆ ಎಂದರೆ ಗೊತ್ತಿಲ್ಲ. ಅಯ್ಯಣ್ಣನು

ಕುಷ್ಠರೋಗಕ್ಕೆ ಒಳಪಟ್ಟಾಗ ನೀವಾಗಲೀ ನಿಮ್ಮ ತಂದೆಯಾಗಲೀ ನರಸಮ್ಮಳಾಗಲೀ ಉಪಚಾರ ಮಾಡಿಲ್ಲ ಎಂದರೆ ಸರಿ.

3. ನೀಲಮ್ಮಳ ಅಂತ್ಯಸಂಸ್ಕಾರ ಹತ್ತಿಕುಣಿಯಲ್ಲಿ ಆಗಿರುತ್ತದೆ. ಸಂಗನಬಸಮ್ಮಳ ಅಂತ್ಯಸಂಸ್ಕಾರ ಎಲ್ಲಿ ಆಯಿತು ಎಂದರೆ ಗೊತ್ತಿಲ್ಲ. ಸಂಗನಬಸಮ್ಮಳನ್ನು 1ನೇ ಪ್ರತಿವಾದಿ ಚಿತ್ತಾಪುರ ತಾಲೂಕಿನ ಅಳ್ಳೊಳ್ಳಿಯಲ್ಲಿ ಸಂರಕ್ಷಣೆ ಮಾಡಿ ಅಂತ್ಯ ಸಂಸ್ಕಾರವನ್ನು ಮಾಡಿದ್ದಾರೆ ಎಂದರೆ ಗೋತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಂಗನಬಸಮ್ಮ ಎಲ್ಲಿ ವಾಸವಾಗಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿಯರು ಸಂಗನಬಸಮ್ಮಳನ್ನು ಜೀವನ ಪರ್ಯಂತ ಸಂರಕ್ಷಣೆ ಮಾಡಿ ಅವಳ ಅಂತ್ಯಸಂಸ್ಕಾರ ಮಾಡಿದ್ದಾರೆ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ಸಂಗನಬಸಮ್ಮಳ ಮರಣ ಪ್ರಮಾಣ ಪತ್ರವನ್ನಾಗಲೀ ನೀಲಮ್ಮಳ ಮರಣ ಪ್ರಮಾಣ ಪತ್ರವನ್ನಾಗಲೀ ಹಾಜರುಪಡಿಸಿದ್ದೀರಾ ಎಂದರೆ ನೀಲಮ್ಮಳ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆಂದು ಉತ್ತರಿಸುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿದಂತಹ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ನೀಲಮ್ಮಳ ಮರಣ ಪ್ರಮಾಣ ಪತ್ರ ಇಲ್ಲ ಎಂದು ಉತ್ತರಿಸುತ್ತಾರೆ. ನೀಲಮ್ಮ ನನ್ನ ಅಜ್ಜಿ ಆಗಬೇಕು. ನೀಲಮ್ಮಳಿಗೆ ಎಷ್ಟು ವರ್ಷಗಳ ಹಿಂದೆ ಮದುವೆ ಆಗಿತ್ತು ಎಂದರೆ ಗೊತ್ತಿಲ್ಲ. ನೀಲಮ್ಮಳಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ನೀಲಮ್ಮಳು ಸಂಗನಬಸಮ್ಮಗಾಗಲೀ, 1ನೇ ಪ್ರತಿವಾದಿಗಾಗಲೀ, ಪ್ರತಿವಾದಿಯ ತಾಯಿ ಬಸಮ್ಮಳಿಗಾಗಲೀ ಎಂದೂ ಪಾಲು ಬೇಕು ಎಂದು ಕೇಳಿಲ್ಲ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ನೀಲಮ್ಮ, ನರಸಮ್ಮ ತಂದೆ ನಾಗಪ್ಪ ಅವರ ಅಜ್ಜಿಗೆ ಸಂಗನಬಸಮ್ಮಳಿಗಾಗಲಿ ಪ್ರತಿವಾದಿ -1 ಮತ್ತು 2 ರವರಿಗಾಗಲೀ ಪಾಲು ಕೇಳಿಲ್ಲ ಎಂದರೆ ನಮ್ಮ ತಾಯಿಯವರು ಕೇಳಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿಯವರು ಕೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಂಗನಬಸಮ್ಮ ಜೀವಂತ ಇರುವಾಗ ನೀಲಮ್ಮಳ ಸಮಕ್ಷಮದಲ್ಲಿ ಬಸಮ್ಮ ಮತ್ತು ಅವಳ ಮಕ್ಕಳ ಹೆಸರಿಗೆ ದಾವಾದ ಆಸ್ತಿ ಸೇರಬೇಕು ಎಂದು ಸಮ್ಮತಿ ಕೊಟ್ಟಿದ್ದಾರೆ ಎಂದರೆ ಹೌದು ಎಂದು ಉತ್ತರಿಸುತ್ತಾರೆ.

4. ದಾವಾದ ಆಸ್ತಿ ಸಂಗನಬಸಮ್ಮಳು ಸ್ವಂತ ಖರೀದಿ ಮಾಡಿದಂತಹ ಪಟ್ಟದ ಜಮೀನು ಎಂದರೆ ಇರಬಹುದು ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಯ ಮೇಲೆ ಜೇವರ್ಗಿಯ ಲ್ಯಾಂಡ್ ಟ್ರಿಬ್ಯುನಲನಲ್ಲಿ ಕೇಸ್ ನಡೆದಿದೆ ಎಂದರೆ ಸರಿ. ಸದರಿ ಕೇಸ್ ನಡೆದಿರುವ ಬಗ್ಗೆ ಬೆಂಗಳೂರಿನಲ್ಲಿ ರಿಟ್ ಪಿಟಿಶನ್ ಹಾಕಿದ್ದರು ಎಂದರೆ ಗೊತ್ತಿಲ್ಲ. ರಿಟ್ ಪಿಟಿಶನ್ ನಂ.14382/2000ರಂತೆ ಹಾಕಿದ್ದರು ಎಂದರೆ ಗೊತ್ತಿಲ್ಲ. ದಿನಾಂಕ 22-01-2002 ರಲ್ಲಿ ರಿಟ್ ಪಿಟಿಶನ್ Allow ಆಯಿತು ಎಂದರೆ ಗೊತ್ತಿಲ್ಲ. ಅದರ ಪ್ರಕಾರ ಜೇವರ್ಗಿ ತಹಸಿಲ್ದಾರರು 07-07-2022 ರಂದು ಲ್ಯಾಂಡ್ ಟ್ರಿಬ್ಯುನಲ್ ನೀಲಮ್ಮಳಿಗೆ ಮತ್ತು ಸಂಗನಬಸಮ್ಮಳಿಗೆ ನೋಟಿಸ್ ಮಾಡಿದ್ದರು ಎಂದರೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಅವರಿಗೆ ನೋಟಿಸ್ ಮಾಡಿರುವ ವಿಚಾರ ನಿಮಗೆ ಗೊತ್ತಿದೆ ಎಂದರೆ ಹೌದು ಎಂದು ಉತ್ತರಿಸುತ್ತಾರೆ.

**ಪ್ರತಿವಾದಿ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ